ಸಿ) ಪಟ್ಟಿಯನ್ನು ಅನುಬಂಧ - ಎ ಮತ್ತು ಬಿ ನಲ್ಲಿ ಲಗತ್ತಿಸಿದೆ.

ಡಿ) ನೀಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಎಫ್) ಕಾನೂನಿನಂತೆ ಖುಲ್ಲಾ ಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರಿನಲ್ಲಿರುವ ಉದ್ಯೋಗ ವಿನಿಮಯ ಕಛೇರಿಗಳು

46 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

1) ಬೆಂಗಳೂರಿನಲ್ಲಿರುವ ಉದ್ಯೋಗ ವಿನಿಮಯ ಕಛೇರಿಗಳ ಅಧಿಕಾರಿಗಳು, ನೊಂದಾಯಿಸಿದ ಅಭ್ಯರ್ಥಿಗಳ ಹೆಸರುಗಳನ್ನು ಕಾನೂನು ರೀತ್ಯ ನಿಯೋಜಕರುಗಳಿಗೆ ಕಳುಹಿಸುತ್ತಿಲ್ಲದಿರುವುದು 'ಸರ್ಕಾರದ ಗಮನಕ್ಕೆ ಬಂದಿದೆಯೆ?

2) ಅಭ್ಯರ್ಥಿಗಳ ಹೆಸರುಗಳನ್ನು ಕಳುಹಿಸುವಲ್ಲಿ ವಿಳಂಬ ಹಾಗೂ ಅಧಿಕಾರಿಗಳ ಕಾನೂನು ಬಾಹಿರ ಕ್ರಮಗಳಿಂದ ಅಭ್ಯರ್ಥಿಗಳ ವಯೋಮಿತಿ ಮೀರಿ, ಉದ್ಯೋಗಕ್ಕೆ ಅನರ್ಹರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

3) ದಿನಾಂಕ 21-6-76 ರಂದು ಹೆಸರನ್ನು ನೊಂದಾಯಿಸಿದ ಶ್ರೀ ಎನ್. ರುಕುಮಂಗೋತ್ತಮ್ (ಪರಿಶಿಷ್ಟ ಜಾತಿ ಅಭ್ಯರ್ಥಿ) ಉದ್ಯೋಗ ವಿನಿಮಯ ಕಛೇರಿ ನೊಂದಣಿ ಸಂಖ್ಯೆ : 7109 : 76ಎಕ್ಸ್ 02.10 ಸಂಖ್ಯೆ 36 ಕೆ.ನಂ. 4ನೇ ರಸ್ತೆ. ಡಿವಿಜನ್ ನಂ. 77 ಭಾಷತಿನಗರ ಈ ಅಭ್ಯರ್ಥಿಗೆ ಇದುವರೆವಿಗೂ ಉದ್ಯೋಗದ ಬಗ್ಗೆ ಯಾವುದೇ ಮಾಹಿತಿ ಬಾರದಿದ್ದು, ಪ್ರಸ್ತುತ ಪರಿಸ್ಥಿತಿ ಸರ್ಕಾರ ತಿಳಿಸುವುದೆ?

ಶ್ರೀ ಸಿ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

1) ಬಂದಿಲ್ಲ

2) ಬಂದಿಲ್ಲ

3) ಶ್ರೀ ರುಕುಮಂಗೋತ್ತಮ್ ಇವರ ನೊಂದಣಿ ಸಂಖ್ಯೆ 11601 : 82 ರಾಷ್ಟ್ರೀಯ ವೃತ್ತಿ ಸಂಖ್ಯೆ ಎಕ್ಸ್ 02.10 ಆಗಿರುತ್ತದೆ. ಅದು 7109 : 76 ಎಕ್ಸ್ 02.10 ಅಲ್ಲ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ (ಸಾಮಾನ್ಯ) ಬೆಂಗಳೂರಿನಲ್ಲಿ ದಾಖಲೆಯಲ್ಲಿ 10,210 ಪರಿಶಿಷ್ಟ ಜಾತಿಯ ಅಭ್ಯರ್ಥಿಗಳೂ ಸೇರಿದಂತೆ 95016 ಅಭ್ಯರ್ಥಿಗಳಿರುತ್ತಾರೆ. ಆದ್ದರಿಂದ ಅಧಿಸೂಚಿತವಾದ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಅವರ ನೊಂದಣಿ ಜೇಷ್ಠತೆಯ ಆಧಾರದ ಮೇರೆಗೆ ಪುರಸ್ಕರಿಸಲಾಗುವುದು. ಖಾಲಿ ಹುದ್ದೆಗಳು ಅಧಿಸೂಚಿತವಾದಾಗ ಇವರು ಹೆಸರನ್ನು ಸಹ ವರ್ಗ, ಅರ್ಹತೆ, ನೊಂದಣಿ, ಜೇಷ್ಠತೆ ಮೇರೆಗೆ ಪರಿಗಣಿಸಲಾಗುವುದು.

ಅರ್ಜಿಗಳನ್ನೊಪ್ಪಿಸುವುದು

1. ಶ್ರೀ ಮಲ್ಲಾರ ಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ ನನ್ನ ಹೆಸರಿನ ಮುಂದಿರುವ ಬೆಳಗಾವಿ ಜಿಲ್ಲೆ, ನಿಪ್ಪಾನಿಯ ಕೈಗಾರಿಕಾ ಹಿಂದುಳಿದ ಪ್ರದೇಶಗಳಲ್ಲಿ ಸಣ್ಣ ಪ್ರಮಾಣದ ಕೈಗಾರಿಕಾ ಸಂಸ್ಥೆಗಳನ್ನು ಬೆಳಸುವುದರ ಹಾಗೂ ಪ್ರೋತ್ಸಾಹ ಕೊಡುವುದರ ಬಗ್ಗೆ ಅರ್ಜಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

2. ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೆ ನನ್ನ ಹೆಸರಿನ ಮುಂದಿರುವ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ ನಯಾನಗರ